

بسم اللهِ الرّحمٰن الرّحيم

# ಸಹಾಬರ ಶ್ರೇಷ್ಠತೆ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **31–12–2021** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

أَشْهَدُ أَنْ لَّا إِلٰهَ إِلَّا اللهُ وَحْدَهٗ لَا شَرِيْكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ.

أَمَّا بَعْدُ فَأَعُوْذُ بِاللهِ مِنَ الشَّيْطٰنِ الرَّجِيْمِ- بِسْمِ اللهِ الرَّحْمٰنِ الرَّحِيْمِ.

اَلْحَمْدُ لِلّٰهِ رَبِّ الْعَالَمِيْنَ. اَلرَّحْمٰنِ الرَّحِيْمِ. مٰلِكِ يَوْمِ الدِّيْنِ. اِيَّاكَ نَعْبُدُ وَاِيَّاكَ نَسْتَعِيْنُ.

اِهْدِنَا الصِّرَاطَ الْمُسْتَقِيْمَ. صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ.

*(ತಶಹ್ಹುದ್, ತಅವ್ವುಧ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಕಳೆದ ಖುತ್ಬದಲ್ಲಿ ಹಝ್ರತ್ ಅಬೂಬಕರ್(ರ)ರ ಸೌರ್ ಗುಹೆಯ ಘಟನೆಯ ಪ್ರಸ್ತಾಪ ನಡೆಯುತ್ತಿತ್ತು. ಈ ಘಟನೆಯ ಬಗ್ಗೆ ಅಲ್ಲಾಹನು ಪವಿತ್ರ ಖುರ್‌ಆನಿನಲ್ಲಿ ಹೀಗೆ ಹೇಳುತ್ತಾನೆ: ನೀವು ಪ್ರವಾದಿಗೆ ನೆರವು ನೀಡದಿದ್ದರು ಕೂಡ ಅವಿಶ್ವಾಸಿಗಳು ಅವರನ್ನು ತನ್ನ ಊರಿನಿಂದ ಬಹಿಷ್ಕರಿಸಿದಾಗ ದಿಟವಾಗಿಯೂ ಅಲ್ಲಾಹನು ಅವರಿಗೆ ನೆರವಿತ್ತಿದ್ದನು – ಅವರು ಇಬ್ಬರಲ್ಲಿ ಒಬ್ಬರಾಗಿದ್ದರು – ಅವರೀರ್ವರೂ ಆ ಗುಹೆಯಲ್ಲಿದ್ದಾಗ 'ನೀನು ವ್ಯಥೆಪಡಬೇಡ, ಖಂಡಿತವಾಗಿಯೂ ಅಲ್ಲಾಹನು ನಮ್ಮೊಂದಿಗಿದ್ದಾನೆ' ಎಂದು ಅವರು ತನ್ನ ಸಂಗಡಿಗನೊಡನೆ ಹೇಳಿದ್ದಾಗ. ಆ ಸಂದರ್ಭದಲ್ಲಿ ಅಲ್ಲಾಹನು ತನ್ನ ಕಡೆಯಿಂದಿರುವ ಅವರಿಗೆ ಸಾಂತ್ವನವನ್ನು ಇಳಿಸಿಕೊಟ್ಟನು. ನಿಮಗೆ ಅಗೋಚರವಾದ ಸೈನ್ಯಗಳಿಂದ ಅವನು ಅವರಿಗೆ ಬೆಂಬಲವಿತ್ತನು ಹಾಗೂ ಅವಿಶ್ವಾಸಿಗಳ ಮಾತನ್ನು ನಿಷ್ಫಲಗೊಳಿಸಿದನು. ಅಲ್ಲಾಹನ ವಚನ ಮಾತ್ರವೇ ಸರ್ವೋನ್ನತವಾದುದು. ಅಲ್ಲಾಹನು ಪ್ರತಾಪವಂತನೂ ವಿವೇಕಶಾಲಿಯೂ ಆಗಿದ್ದಾನೆ.

ಮಕ್ಕದ ಸತ್ಯನಿಷೇಧಿಗಳು ಗುಹೆಯ ಮುಂಭಾಗದಲ್ಲಿ ನಿಂತುಕೊಂಡು ಮಾತನಾಡುತ್ತಿದ್ದಾಗ ಹಝ್ರತ್ ಪೈಗಂಬರ್(ಸ) ಹಿಡಿಯಲ್ಪಡುವರು ಎಂಬ ಶಂಕೆಯಿಂದ ಹಝ್ರತ್ ಅಬೂಬಕರ್(ರ) ಗಾಬರಿಗೊಂಡರು. ಆಗ ಹಝ್ರತ್ ಪೈಗಂಬರ್(ಸ) ಹೇಳಿದರು: **ಲಾ ತಹ್‌ಝನ್ ಇನ್ನಲ್ಲಾಹ ಮಅನಾ** (ದುಃಖಿಸಬೇಡ, ಖಂಡಿತವಾಗಿಯೂ ಅಲ್ಲಾಹನು ನಮ್ಮೊಂದಿಗಿದ್ದಾನೆ). ಸೌರ್ ಗುಹೆಯಿರುವ ಪರ್ವತದ ಬಳಿಗೆ ತಲುಪಿದ ನಂತರ ಪತ್ತೆದಾರನು ಹೇಳಿದನು: ಅವರಿಬ್ಬರೂ ಇಲ್ಲಿಂದ ಮುಂದಕ್ಕೆ ಹೋಗಿಲ್ಲ. ಆಗ ಯಾರೋ ಗುಹೆಯ ಒಳಗೆ ಇಣುಕಲು ಪ್ರಯತ್ನಿಸಿದರು. ಆಗ ಉಮಯ್ಯ ಬಿನ್ ಖಲ್‌ಫ್ ಕಠಿಣವಾಗಿ ಮತ್ತು ಪರಿವೆಯಿಲ್ಲದೆ ಹೀಗೆ ಹೇಳಿದರು: ಈ ಬಲೆ ಮತ್ತು ಮರವನ್ನು ನಾನು ಮುಹಮ್ಮದ್‌ರ (ಸಲ್ಲಲ್ಲಾಹು ಅಲೈಹಿ ವಸಲ್ಲಮ್) ಜನನಕ್ಕಿಂತ ಮುಂಚಿನಿಂದಲೇ ನೋಡುತ್ತಿದ್ದೇನೆ. ನಿಮ್ಮ ಬುದ್ಧಿ ಕೆಟ್ಟು ಹೋಗಿದೆ. ಅವರು ಇಲ್ಲಿ ಹೇಗೆ ಇರಲು ಸಾಧ್ಯ.

ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಹೇಳುತ್ತಾರೆ: ಮುಹಮ್ಮದ್(ಸ)ರನ್ನು ಜೀವಂತವಾಗಿ ಅಥವಾ ಮೃತರಾದ ಸ್ಥಿತಿಯಲ್ಲಿ ಹಿಡಿದು ತರುವವರಿಗೆ ಮಕ್ಕದ ಖುರೈಶಿಗಳು ನೂರು ಒಂಟೆಗಳ ಬಹುಮಾನದ ಘೋಷಣೆಯನ್ನು ಮಾಡಿದ್ದರು. ಈ ಬಹುಮಾನದ ಲಾಲಸೆಯಿಂದ ಅನೇಕ ಜನರು ಮಕ್ಕದ ನಾಲ್ಕೂ ಕಡೆಗಳಿಗೆ ಹೊರಟಿದ್ದರು. ಖುರೈಶಿನ ಸರದಾರರು ಗುಹೆಯ ಬಳಿಗೆ ತಲುಪಿದಾಗ ಅವರು ಕಂಡದ್ದೇನು? ಗುಹೆಯ ಮುಂಭಾಗದಲ್ಲಿ ಇದ್ದ ಮರದ ಕೊಂಬೆಗಳಲ್ಲಿ ಒಂದು ಕೊಂಬೆ ಗುಹೆಯ ನೇರ ಮುಖಭಾಗದಲ್ಲಿ ಇದ್ದು ಅದರಲ್ಲಿ ಒಂದು ಪಾರಿವಾಳ ಗೂಡು ಕಟ್ಟಿ ಮೊಟ್ಟೆಗಳನ್ನು ಹಾಕಿತ್ತು. ಜೇಡ ಬಲೆಯನ್ನು ಹೆಣೆದಿತ್ತು. ಬಾಹ್ಯವಾಗಿ ಇದು ದುರ್ಬಲ ವರದಿಯಾಗಿದೆ. ಆದರೆ ಹೀಗೆ ನಡೆದಿದ್ದರೂ ಅಚ್ಚರಿಯ ಮಾತೇನಲ್ಲ. ಏಕೆಂದರೆ ಜೇಡವು ಕೆಲವೊಮ್ಮೆ ಕೆಲವು ನಿಮಿಷಗಳಲ್ಲಿ ಒಂದು ವಿಸ್ತಾರ ಜಾಗದಲ್ಲಿ ಬಲೆಯನ್ನು ಮಾಡುತ್ತದೆ. ಪಾರಿವಾಳಕ್ಕೂ ಗೂಡು ಕಟ್ಟಲು ಮತ್ತು ಮೊಟ್ಟೆಗಳನ್ನು ಹಾಕಲು ಹೆಚ್ಚು ತಡವಾಗುವುದಿಲ್ಲ. ಆದ್ದರಿಂದ ಅಲ್ಲಾಹನು ತನ್ನ ಪ್ರವಾದಿಯ ಸಂರಕ್ಷಣೆಗಾಗಿ ಇಂತಹ ಏರ್ಪಾಡು ಮಾಡುವುದು ಅಸಂಭವನೀಯವಾದ ಸಂಗತಿಯೇನಲ್ಲ. ಬದಲಾಗಿ ಆ ಹೊತ್ತಿನಲ್ಲಿ ಹೀಗೆ ಆಗುವ ಸಂಪೂರ್ಣ ಸಾಧ್ಯತೆಯಿದೆ. ಖುರೈಶಿಗಳು ಎಷ್ಟು ಸಮೀಪಕ್ಕೆ ತಲುಪಿದ್ದರು ಎಂದರೆ, ಅವರ ಕಾಲುಗಳು ಗುಹೆಯ ಒಳಗಿನಿಂದ ಕಾಣಬಹುದಾಗಿತ್ತು. ಅವರ ಶಬ್ದ ಕೇಳುತ್ತಿತ್ತು ಎಂದು ವರದಿಯಲ್ಲಿ ಬಂದಿದೆ. ಸತ್ಯನಿಷೇಧಿಗಳನ್ನು ಇಷ್ಟು ಸಮೀಪದಲ್ಲಿ ಕಂಡು ಹಝ್ರತ್ ಅಬೂಬಕರ್(ರ) ಹೆದರಿದಾಗ ಹಝ್ರತ್ ಪೈಗಂಬರ್(ಸ) ಹೇಳಿದರು: ಹೇ ಅಬೂಬಕರ್, ಇಬ್ಬರ ಜೊತೆಗೆ ಮೂರನೆಯವನಾಗಿ ಅಲ್ಲಾಹನು ಇರುವ ಇಬ್ಬರು ವ್ಯಕ್ತಿಗಳ ಕುರಿತು ನಿನ್ನ ಭಾವನೆಯೇನು? ಆಗ ಹಝ್ರತ್ ಅಬೂಬಕರ್(ರ) ನೋವುಭರಿತ ಸ್ವರದಿಂದ ಹೇಳಿದರು: ಯಾ ರಸೂಲಲ್ಲಾಹ್, ನಾನು ಕೊಲ್ಲಲ್ಪಟ್ಟರೆ ನಾನಂತು ಒಂದು ಜೀವ ಮಾತ್ರ. ಆದರೆ ನಿಮಗೆ ಏನಾದರೂ ಹಾನಿಯಾದರೆ ಸಂಪೂರ್ಣ ಸಮುದಾಯ ಅಳಿದಂತಾಗುವುದು.

ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಈ ಘಟನೆಯ ಒಂದು ಮಗ್ಗುಲು ಏನೆಂದರೆ, ಮೂಸಾರ ಸಂಗಡಿಗರು ಗಾಬರಿಗೊಂಡು ಹೇಳಿದರು: ಹೇ ಮೂಸಾ, ನಾವು ಹಿಡಿಗೂಡಲ್ಪಟ್ಟೆವು. ಆದರೆ ಮುಹಮ್ಮದ್(ಸ)ರಿಗೆ ಅಲ್ಲಾಹನೊಂದಿಗೆ ಇದ್ದ ಭರವಸೆಯ ಪ್ರಭಾವ ಅವರ ಸಂಗಡಿಗನ ಮೇಲೆಯೂ ಆಗಿತ್ತು. ನಾವು ಹಿಡಿಗೂಡಲ್ಪಟ್ಟೆವು ಎಂಬ ಮಾತು ಅವರ ನಾಲಗೆಯಿಂದ ಹೊರಡಲಿಲ್ಲ. ಅವರು ಇಷ್ಟು ಮಾತ್ರ ಹೇಳಿದರು: ಶತ್ರುಗಳು ಎಷ್ಟು ಸಮೀಪಕ್ಕೆ ತಲುಪಿರುವರು ಎಂದರೆ, ಅವರು ನೋಡಲು ಬಯಸುವುದಾದರೆ ನೋಡಬಹುದಾಗಿದೆ.

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಆಪತ್ತಿನ ಆ ಸಮಯದಲ್ಲಿ ಹಝ್ರತ್ ಪೈಗಂಬರ್(ಸ) ಹಝ್ರತ್ ಅಬೂಬಕರ್(ರ)ರನ್ನು ಆಯ್ಕೆ ಮಾಡಿದ್ದು ಅವರ ಸತ್ಯಸಂಧತೆ

ಮತ್ತು ಉನ್ನತ ಮಟ್ಟದ ನಿಷ್ಠೆಗೆ ಪ್ರಬಲವಾದ ಪುರಾವೆಯಾಗಿದೆ. ಆ ಸಮಯದಲ್ಲಿ ಹಝ್ರತ್ ಪೈಗಂಬರ್(ಸ)ರ ಬಳಿ ಎಪ್ಪತ್ತು ಎಂಬತ್ತರಷ್ಟು ಸಹಾಬಿಯರಿದ್ದರು. ಅವರಲ್ಲಿ ಹಝ್ರತ್ ಅಲಿ(ರ) ಕೂಡ ಇದ್ದರು. ಆದರೆ ಹಝ್ರತ್ ಪೈಗಂಬರ್(ಸ) ತನಗೆ ಜೊತೆಗಾರನನ್ನಾಗಿ ಆ ಸಹಾಬಿಯರ ಪೈಕಿ ಹಝ್ರತ್ ಅಬೂಬಕರ್(ರ)ರನ್ನೇ ಆಯ್ಕೆ ಮಾಡಿದರು. ಇದರ ರಹಸ್ಯವೇನು? ಸಂಗತಿಯೇನೆಂದರೆ, ಹಝ್ರತ್ ಪೈಗಂಬರ್(ಸ) ಅಲ್ಲಾಹನ ಕಣ್ಣುಗಳ ಮೂಲಕ ನೋಡುತ್ತಾರೆ ಮತ್ತು ಅವರ ಭಾವನೆಗಳು ಅಲ್ಲಾಹನ ಕಡೆಯಿಂದಲೇ ಬರುತ್ತವೆ. ಆದ್ದರಿಂದ ಈ ಕೆಲಸಕ್ಕಾಗಿ ಅತ್ಯುತ್ತಮ ಮತ್ತು ಅನುಯೋಜ್ಯವಾದ ವ್ಯಕ್ತಿ ಹಝ್ರತ್ ಅಬೂಬಕರ್(ರ) ಆಗಿರುವರು ಎಂದು ಅಲ್ಲಾಹನೇ ಹಝ್ರತ್ ಪೈಗಂಬರ್(ಸ)ರಿಗೆ ದಿವ್ಯದರ್ಶನ ಮತ್ತು ದಿವ್ಯವಾಣಿ ಮೂಲಕ ತಿಳಿಸಿದನು. ಹಝ್ರತ್ ಅಬೂಬಕರ್(ರ) ಈ ಕಷ್ಟದ ಸಮಯದಲ್ಲಿ ಅವರ ಜೊತೆಯಾದರು. ಅದು ಅತ್ಯಂತ ಅಪಾಯಕರವಾದ ಪರೀಕ್ಷಣೆಯ ಘಟ್ಟವಾಗಿತ್ತು. ಹಝ್ರತ್ ಈಸಾ ಮಸೀಹ್‌ರಿಗೆ ಈ ರೀತಿಯ ಸ್ಥಿತಿ ಬಂದಾಗ ಅವರ ಶಿಷ್ಯರು ಅವರನ್ನು ಬಿಟ್ಟು ಪರಾರಿಯಾದರು. ಒಬ್ಬನು ಅವರನ್ನು ಶಪಿಸಿದನು. ಆದರೆ ಸಹಾಬಿಯರಲ್ಲಿ ಪ್ರತಿಯೊಬ್ಬರು ಸಂಪೂರ್ಣವಾದ ಪ್ರಾಮಾಣಿಕತೆಯ ಮಾದರಿಯನ್ನು ತೋರಿಸಿದರು. ಹಝ್ರತ್ ಪೈಗಂಬರ್(ಸ) ಹಝ್ರತ್ ಅಬೂಬಕರ್(ರ)ರನ್ನು ತನ್ನ ಜೊತೆಗೆ ಸೇರಿಸುವ ವಾಕ್ಯದ ಬಗ್ಗೆ ಚಿಂತಿಸಿರಿ. ಅವರು ಹೇಳಿದರು: **ಇನ್ನಲ್ಲಾಹ ಮಅನಾ. "ಮಅನಾ"** ಎಂಬ ಪದದಲ್ಲಿ ಇಬ್ಬರೂ ಸೇರುತ್ತಾರೆ. ಎಂದರೆ ಅಲ್ಲಾಹನು ನಿನ್ನ ಮತ್ತು ನನ್ನ ಜೊತೆಗಿದ್ದಾನೆ. ಅಲ್ಲಾಹನು ತಕ್ಕಡಿಯ ಒಂದು ತಟ್ಟೆಯಲ್ಲಿ ಹಝ್ರತ್ ಪೈಗಂಬರ್(ಸ)ರನ್ನು ಮತ್ತೊಂದು ತಟ್ಟೆಯಲ್ಲಿ ಹಝ್ರತ್ ಅಬೂಬಕರ್(ರ)ರನ್ನು ಇರಿಸಿದ್ದಾನೆ.

ವರದಿಯಲ್ಲಿ ಹೀಗೆ ಬಂದಿದೆ: ತೀರ್ಮಾನಿಸಲಾದ ಯೋಜನೆ ಪ್ರಕಾರ ಹಝ್ರತ್ ಅಬೂಬಕರ್(ರ)ರ ಬುದ್ಧಿವಂತ ಮಗನಾದ ಹಝ್ರತ್ ಅಬ್ದುಲ್ಲಾಹ್ ಬಿನ್ ಅಬೂಬಕರ್(ರ) ರಾತ್ರಿ ಸಮಯದಲ್ಲಿ ಸೌರ್ ಗುಹೆಗೆ ಬರುತ್ತಿದ್ದರು ಮತ್ತು ಪೂರ್ತಿ ದಿನದ ವಾರ್ತೆಗಳನ್ನು ಹೇಳಿಕೊಡುತ್ತಿದ್ದರು, ನಿರ್ದೇಶನಗಳನ್ನು ಪಡೆಯುತ್ತಿದ್ದರು. ಮಕ್ಕದಲ್ಲೇ ರಾತ್ರಿ ಕಳೆದರು ಎಂಬಂತೆ ಮುಂಜಾನೆ ಮಕ್ಕಕ್ಕೆ ಮರಳಿ ಹೋಗುತ್ತಿದ್ದರು. ಆಮಿರ್ ಬಿನ್ ಫುಹೈರರ ಬುದ್ಧಿವಂತಿಕೆ ಏನಾಗಿತ್ತು ಎಂದರೆ, ರಾತ್ರಿ ಸಮಯದಲ್ಲಿ ಹಾಲು ನೀಡುವ ಆಡುಗಳ ಹಾಲನ್ನು ನೀಡಿದ ನಂತರ ಹಝ್ರತ್ ಅಬ್ದುಲ್ಲಾಹ್ ಬಿನ್ ಅಬೂಬಕರ್‌ರ ಹೆಜ್ಜೆಗುರುತುಗಳನ್ನು ಅಳಿಸುವ ರೀತಿಯಲ್ಲಿ ಆಡುಗಳನ್ನು ವಾಪಾಸ್ಸು ಕೊಂಡು ಹೋಗುತ್ತಿದ್ದರು. ಸಹೀಹ್ ಬುಖಾರಿಯ ವರದಿಯ ಪ್ರಕಾರ, ಮೂರು ದಿನಗಳ ನಂತರದ ಬೆಳಿಗ್ಗಿನ ಸಮಯದಲ್ಲಿ ಒಂಟೆಗಳೊಂದಿಗೆ ತಲುಪಬೇಕೆಂದು ಅಬ್ದುಲ್ಲಾಹ್ ಬಿನ್ ಅರೀಖತ್‌ರಿಂದ ವಾಗ್ದಾನ ಪಡೆಯಲಾಗಿತ್ತು. ಅದರಂತೆ ಮೂರನೇ ದಿನದಂದು ಅವರು ಒಂಟೆಗಳೊಂದಿಗೆ ಸೌರ್ ಗುಹೆಗೆ ತಲುಪಿದರು. ಹಝ್ರತ್ ಪೈಗಂಬರ್(ಸ) ಖಸ್ವಾ ಎಂಬ ಒಂಟೆಯ ಮೇಲೆ ಸವಾರರಾದರು ಎಂದು ವರದಿಯಿದೆ. ಹಝ್ರತ್ ಅಬೂಬಕರ್(ರ) ತನ್ನ ಒಂಟೆಯ ಮೇಲೆ ತನ್ನೊಂದಿಗೆ ಆಮಿರ್ ಬಿನ್ ಫುಹೈರರನ್ನು ಸವಾರಿ ಮಾಡಿಸಿದರು ಮತ್ತು ಅರೀಖತ್ ತನ್ನ ಒಂಟೆಯಲ್ಲಿ ಸವಾರರಾದರು. ಹಝ್ರತ್ ಅಬೂಬಕರ್(ರ)ರ ಬಳಿ ಮನೆಯಲ್ಲಿ ಒಟ್ಟು ಐದು ಅಥವಾ ಆರು ಸಾವಿರ ದಿರ್ಹಂ ಇತ್ತು. ಅವರು ಹೊರಡುವಾಗ ಅದನ್ನು ತನ್ನ ಜೊತೆಗೆ ತೆಗೆದು ಕೊಂಡಿದ್ದರು. ಅವರು ಮಕ್ಕದಿಂದ ಹೊರಡುವಾಗ ಬಹಳ ದುಃಖದಿಂದ ಹೀಗೆ ಹೇಳಿದರು: ಈ ಜನರು ತಮ್ಮ ಪ್ರವಾದಿಯನ್ನು ಹೊರಗೆ ಹಾಕಿರುವರು. ಈಗ ಇವರು ಖಂಡಿತ ನಾಶವಾಗುವರು.

ಮಕ್ಕದಿಂದ ಸುಮಾರು 82 ಮೈಲು ದೂರದಲ್ಲಿರುವ ಜುಹ್‌ಫ ಎಂಬ ಪ್ರದೇಶಕ್ಕೆ ತಲುಪಿದಾಗ **"ಇನ್ನಲ್ಲಧೀ ಫರಝ ಅಲೈಕಲ್ ಖುರ್‌ಆನ ಲರಾದ್ದುಕ ಇಲಾ ಮಆದ್"** ಎಂಬ ಪವಿತ್ರ ಖುರ್‌ಆನಿನ ವಚನ ಅವತೀರ್ಣವಾಯಿತು. ಅದರ ಅರ್ಥ ಹೀಗಿದೆ: ನಿನ್ನ ಮೇಲೆ ಖುರ್‌ಆನ್ ಅಧ್ಯಾಪನೆಗಳನ್ನು ಕಡ್ಡಾಯಗೊಳಿಸಿದವನು ಖಂಡಿತವಾಗಿಯೂ ನಿನ್ನನ್ನು ಮರಳಬೇಕಾದ ಸ್ಥಳಕ್ಕೆ ಮರಳಿಸುವನು.

ರಾತ್ರಿ ಪೂರ್ತಿ ಈ ಯಾತ್ರೆ ಜಾರಿಯಲ್ಲಿತ್ತು. ಮಧ್ಯಾಹ್ನವಾಗುವಾಗ ಒಂದು ಪರ್ವತದ ನೆರಳಿನಲ್ಲಿ ಈ ಸಂಘವು ಆರಾಮ ಮಾಡಲು ನಿಂತಿತು. ಹಝ್ರತ್ ಅಬೂಬಕರ್(ರ) ಹಾಸಿಗೆಯನ್ನು ಮಾಡಿದರು. ಹಝ್ರತ್ ಪೈಗಂಬರ್(ಸ)ರೊಡನೆ ಆರಾಮ ಮಾಡಲು ವಿನಂತಿಸಿದರು. ಹಝ್ರತ್ ಪೈಗಂಬರ್(ಸ) ಅದರಲ್ಲಿ ಮಲಗಿದರು. ಅನಂತರ ಹಿಂಬಾಲಿಸುವವರಲ್ಲಿ ಯಾರಾದರೂ ಬರುತ್ತಿದ್ದಾರೆಯೇ ಎಂದು ನೋಡಲಿಕ್ಕಾಗಿ ಹಝ್ರತ್ ಅಬೂಬಕರ್(ರ) ಹೊರಗೆ ಬಂದರು. ಅಷ್ಟರಲ್ಲಿ ದೂರದಿಂದ ಆಡುಗಳನ್ನು ಮೇಯಿಸುವವನೊಬ್ಬನು ನೆರಳನ್ನು ಹುಡುಕುತ್ತಾ ಅಲ್ಲಿಗೆ ಬಂದನು. ಹಝ್ರತ್ ಅಬೂಬಕರ್(ರ) ಅವನೊಡನೆ, ನೀನು ನಮಗಾಗಿ ಸ್ವಲ್ಪ ಹಾಲನ್ನು ಕರೆಯುವಿಯಾ? ಎಂದು ಕೇಳಿದರು. ಸರಿಯೆಂದು ಅವನು ಹೇಳಿದನು. ಆಡುಗಳ ಕೆಚ್ಚಲು ಶುಚಿಗೊಳಿಸಲು ತಿಳಿಸಿ ಬಳಿಕ ತನ್ನ ಕಣ್ಣೆದುರಿಗೆಯೇ ಹಾಲು ಹಿಂಡಿಸಿ ಒಂದು ಪಾತ್ರೆಯಲ್ಲಿ ಹಾಕಿ ಅದನ್ನು ಮೃದುಗೊಳಿಸಲು ಸ್ವಲ್ಪ ನೀರನ್ನೂ ಹಾಕಿ ಹಝ್ರತ್ ಪೈಗಂಬರ್(ಸ)ರ ಸನ್ನಿಧಿಯಲ್ಲಿ ಇರಿಸಿದರು. ಹಝ್ರತ್ ಪೈಗಂಬರ್(ಸ) ಎಷ್ಟು ಕುಡಿದರು ಎಂದರೆ, ಅದರಿಂದ ಹಝ್ರತ್ ಅಬೂಬಕರ್(ರ) ಸಂತೋಷಗೊಂಡರು. ಅನಂತರ ಅರೀಖ್‌ನಂತಹ ನುರಿತ ದಾರಿದರ್ಶಕನ ಮೇಲ್ನೋಟದಲ್ಲಿ ತೀರಪ್ರದೇಶದ ಗ್ರಾಮಗಳ ಸಮೀಪದಿಂದಾಗಿ ಮದೀನದ ಕಡೆಗೆ ಈ ಯಾತ್ರೆ ಮುಂದುವರಿಯಿತು.

ಬಹುಮಾನದ ಲಾಲಸೆಯಿಂದ ಹಝ್ರತ್ ಪೈಗಂಬರ್(ಸ)ರನ್ನು ಹಿಂಬಾಲಿಸಿದವರಲ್ಲಿ ಒಬ್ಬರ ಹೆಸರು ಸುರಾಖ ಬಿನ್ ಮಾಲಿಕ್ ಎಂದಾಗಿತ್ತು. ಅವರು ಅನಂತರ ಮುಸ್ಲಿಮರಾದರು. ಅವರು ಸ್ವತಃ ಈ ಘಟನೆಯನ್ನು ವಿವರಿಸಿರುವರು. ಅವರ ಪ್ರಕಾರ ಪದೇ ಪದೇ ಹಿಂಬಾಲಿಸುವುದರ ವಿರುದ್ಧವಾಗಿ ಶಕುನ ಫಲ ಬರುತ್ತಿದ್ದರೂ ಅವರು ಹಿಂಬಾಲಿಸುವ ಪ್ರಯತ್ನ ಮಾಡುತ್ತಿದ್ದರು. ಅವರ ಒಂಟೆ ಹೀನಾಯವಾಗಿ ಎಡವಿ ಬೀಳುತಿತ್ತು. ಅದರ ಕಾಲುಗಳು ಮರಳಿನಲ್ಲಿ ಹೂತುಹೋಗಿದ್ದುವು. ಕೊನೆಗೆ ಹಿಂಬಾಲಿಸುವುದು ಸರಿಯಲ್ಲವೆಂದು ಅವರಿಗೆ ಖಚಿತವಾಯಿತು. ಅವರು ಅಭಯ ನೀಡುವುದಾಗಿ ಉಚ್ಚವಾಗಿ

ಹೇಳಿದರು. ಹಝ್ರತ್ ಪೈಗಂಬರ್(ಸ)ರ ಮುಂದೆ ಬಂದು ಹೀಗೆ ಹೇಳಿದರು: ನೀವು ಒಂದು ದಿನ ಖಂಡಿತ ಅರಸರಾಗುವಿರಿ ಎಂದು ನನಗೆ ದೃಢವಿಶ್ವಾಸವಿದೆ. ಆ ದಿನದಂದು ನನ್ನೊಡನೆ ಗೌರವಾದರದಿಂದ ವರ್ತಿಸಲಾಗುವುದು ಎಂದು ನನಗೆ ಲಿಖಿತ ವಾಗ್ದಾನವನ್ನು ನೀಡಿರಿ. ಹಝ್ರತ್ ಪೈಗಂಬರ್(ಸ) ಅವರಿಗೆ ಹಾಗೆ ಲಿಖಿತವನ್ನು ನೀಡಿದರು.

(ಈ ಪ್ರಸ್ತಾಪ ಮುಂದುವರೆಯುವುದು ಎಂದು ಹೇಳಿದ ನಂತರ ಹುಝೂರ್ ಹೊಸ ವರ್ಷದ ಆರಂಭದಲ್ಲಿ ಜಾಗತಿಕ ಅಹ್ಮದಿಯಾ ಜಮಾಅತನ್ನು ದುಆ, ನಫ್ಲ್ ನಮಾಝ್ ಮತ್ತು ವ್ಯಯಕ್ತಿಕ, ಸಾಮೂಹಿಕ ತಹಜ್ಜುದ್ ನಮಾಝಿನ ಕಡೆಗೆ ಗಮನ ಸೆಳೆದರು. ದುರೂದ್ ಶರೀಫ್, ಇಸ್ತಿಗ್‌ಫಾರ್ ಮತ್ತು **ರಬ್ಬನಾ ಲಾ ತುಝಿಗ್ ಖುಲೂಬನಾ ಬಅ್‌ದ ಇಧ್ ಹದೈತನಾ ವಹಬ್‌ಲನಾ ಮಿಲ್ಲದುನ್‌ಕ ರಹ್ಮತನ್ ಇನ್ನಕ ಅಂತಲ್ ವಹ್ಹಾಬ್** ಮತ್ತು **ರಬ್ಬನಗ್‌ಫಿರ್‌ಲನಾ ಧುನೂಬನಾ ವ ಇಸ್ರಾಫನಾ ಫೀ ಅಮ್ರಿನಾ ವ ಸಬ್ಬಿತ್ ಅಖ್‌ದಾಮನಾ ವನ್‌ಸುರ್‌ನಾ ಅಲಲ್ ಖೌಮಿಲ್ ಕಾಫಿರೀನ್** ಎಂಬೀ ದುಆಗಳನ್ನು ಮಾಡಲು ಉಪದೇಶಿಸಿದರು. ಖುತ್ಬದ ಕೊನೆಯಲ್ಲಿ ಈ ಕೆಳಗಿನ ದಿವಂಗತರ ಬಗ್ಗೆ ಪ್ರಸ್ತಾಪಿಸಿ ಅವರ ಜನಾಝ ಗಾಇಬ್ ನಮಾಝ್ ನಿರ್ವಹಿಸುವುದಾಗಿ ಹುಝೂರ್ ಹೇಳಿದರು:)

ಮುಲ್ತಾನಿನ ಮಾಜಿ ಜಿಲ್ಲಾ ಅಮೀರ್ ಸನ್ಮಾನ್ಯ ಮಲಿಕ್ ಫಾರೂಖ್ ಅಹ್ಮದ್ ಖೋಖರ್ ಸಾಹಿಬ್, ಇಂಡೋನೇಶ್ಯದ ಸನ್ಮಾನ್ಯ ರಹ್ಮತುಲ್ಲಾಹ್ ಸಾಹಿಬ್ ಮತ್ತು ಸನ್ಮಾನ್ಯ ಅಲ್‌ಹಾಜ್ ಅಬ್ದುಲ್ ಹಮೀದ್ ಟಾಕ್ ಸಾಹಿಬ್ ಯಾರೀಪೂರ ಕಾಶ್ಮೀರ. ಅಬ್ದುಲ್ ಹಮೀದ್ ಸಾಹಿಬ್‌ರು ಡಿಸೆಂಬರ್ 24ರಂದು 94ನೇ ವಯಸ್ಸಿನಲ್ಲಿ ನಿಧನರಾದರು – **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ಅಲ್ಲಾಹನ ಅನುಗ್ರಹದಿಂದ ಅವರು ವಸಿಯ್ಯತ್ ಮಾಡಿದ್ದರು. ಯಾರಿಪೂರದ ಆರಂಭ ಕಾಲದ ಅಹ್ಮದಿಯರಲ್ಲಿ ಒಬ್ಬರಾದ ಮುಹಮ್ಮದ್ ಅಕ್ರಂ ಟಾಕ್ ಸಾಹಿಬ್‌ರ ಮಗನಾಗಿದ್ದರು. ಅವರು ಬಹಳ ಸಾತ್ವಿಕ, ಸೌಮ್ಯ ಸ್ವಭಾವಿ, ಸ್ನೇಹಮಯಿ, ಎಲ್ಲರಿಗೂ ಪ್ರಿಯಕರ, ಸಭ್ಯ, ಮೌನಪ್ರಕೃತಿಯ ಹಿರಿಯ ವ್ಯಕ್ತಿಯಾಗಿದ್ದರು. ದೀರ್ಘ ಕಾಲ ಜಮಾಅತಿನ ಸೇವೆ ಸಲ್ಲಿಸುವ ಸೌಭಾಗ್ಯ ಪಡೆದರು. ಜಮ್ಮು ಕಾಶ್ಮೀರ ರಾಜ್ಯದ ಅಮೀರ್ ಅಲ್ಲದೆ, ಜಿಲ್ಲಾ ಅಮೀರ್ ಮತ್ತು ನಾಝಿಮ್ ಅನ್ಸಾರುಲ್ಲಾಹ್ ಆಗಿ ಸೇವೆ ಸಲ್ಲಿಸಲು ಸೌಭಾಗ್ಯ ಪಡೆದರು. ಪ್ರಾದೇಶಿಕ ಜಮಾಅತಿನಲ್ಲಿ ಪ್ರಾದೇಶಿಕ ಹುದ್ದೆಗಳಲ್ಲಿ ಸೇವೆ ಸಲ್ಲಿಸುತ್ತಿದ್ದರು. ವರ್ಷಾನುಗಟ್ಟಲೆ ತಹ್ರೀಕ್ ಜದೀದ್ ಭಾರತದ ಸ್ವತಂತ್ರ ಸದಸ್ಯರಾಗಿದ್ದರು. ರಾಜ್ಯ ಇಮಾರತಿನಲ್ಲಿ ಅವರ ಕಾಲದಲ್ಲಿ 1987ರಲ್ಲಿ ಕಾಶ್ಮೀರದಲ್ಲಿ ಜಮಾಅತಿನ ಐದು ಸ್ಕೂಲುಗಳ ಸ್ಥಾಪನೆಯಾಯಿತು. ಅನೇಕ ಮಸೀದಿಗಳು ಮತ್ತು ಮಿಶನ್ ಹೌಸುಗಳ ನಿರ್ಮಾಣಕ್ಕಾಗಿ ಅವರು ಬಹಳ ಪರಿಶ್ರಮಿಸಿದರು. ಯುವಕರ ಜ್ಞಾನಪರವಾದ ಸಾಮರ್ಥ್ಯಗಳನ್ನು ಮೇಲಕ್ಕೆತ್ತಲು ಮತ್ತು ವರ್ಧಿಸಲಿಕ್ಕಾಗಿ ಅವರು ಸಾಕಷ್ಟು ಪ್ರಯತ್ನಗಳನ್ನು ಮಾಡುತ್ತಿದ್ದರು. ಈ ಕೆಲಸದಲ್ಲಿ ಸದಾ ಮುಂದಿರುತ್ತಿದ್ದರು. ಯಾರೀಪೂರದ ಪ್ರದೇಶದಲ್ಲಿ ಅವರ ಸಾಮಾಜಿಕ ಸೇವೆಗಳ ಕಾರಣದಿಂದ ಅವರಿಗೆ ಬಹಳ ಗೌರವವಿತ್ತು. ಅಲ್ಲಾಹನು ಅವರೊಂದಿಗೆ ಮಗ್‌ಫಿರತ್ ಮತ್ತು ಕಾರುಣ್ಯದಿಂದ ವರ್ತಿಸಲಿ. (ಹುಝೂರ್ ಎಲ್ಲ ದಿವಂಗತರ ಮಗ್‌ಫಿರತ್ ಮತ್ತು ಉನ್ನತ ಪದವಿಗಳಿಗಾಗಿ ದುಆ ಮಾಡಿದರು.)

*****

اَلْحَمْدُ لِلّٰهِ نَحْمَدُهُ وَنَسْتَعِيْنُهُ وَنَسْتَغْفِرُهُ وَنُؤْمِنُ بِهٖ وَنَتَوَكَّلُ عَلَيْهِ وَنَعُوْذُ بِاللّٰهِ
مِنْ شُرُوْرِ اَنْفُسِنَا وَمِنْ سَيِّئَاتِ اَعْمَالِنَا مَنْ يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ
فَلَا هَادِيَ لَهٗ ۔ وَنَشْهَدُ اَنْ لَّآ اِلٰهَ اِلَّا اللّٰهُ وَنَشْهَدُ اَنَّ مُحَمَّدًا عَبْدُهٗ وَرَسُوْلُهٗ
عِبَادَ اللّٰهِ رَحِمَكُمُ اللّٰهُ اِنَّ اللّٰهَ يَاْمُرُ بِالْعَدْلِ وَالْاِحْسَانِ وَاِيْتَاءِ ذِى الْقُرْبٰى
وَيَنْهٰى عَنِ الْفَحْشَآءِ وَالْمُنْكَرِ وَالْبَغْيِ يَعِظُكُمْ لَعَلَّكُمْ تَذَكَّرُوْنَ ۝ اُذْكُرُوا اللّٰهَ
يَذْكُرْكُمْ وَادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرُ.


***Friday Sermon delivered by Hadrath Khaleefatul Masih Al Khamis(atba)***
*At, Masjid Mubarak, Islamabad, Tilford, UK, On 31-12-2021*

**Summarized by** *Majlis Ansarullah Bharat*

***Kannada Translation**:* Moulavi Inamullah for Kannada Desk, Qadian

***Reviewed by**:* M.P Ibrahim |***Layout**:* U Basheer Ahmad

***Published By**:* Kannada Isha'at Team for Nazarath Nashr-O-Isha'ath, Qadian

***Email**:* *khutuba.kannada@gmail.com*

**You can find all the Sermons archived at**: www.alislam.org/friday-sermon